ದಿನ ಪತ್ರಿಕೆ

Reg No. M 1293
Daily & Weekly

This Space is available for Advt.

SATYAVADI Oldest Newspaper of Mysore

ಸತ್ಯವಾದಿ

ಸಂಪುಟ 26 ಸಂಚಿಕೆ 3010] ಮಂಗಳವಾರ 25—5—1943 [3 ಪೈ

Opera — Aryamala

ಅಪೆರಾ——

2 ನೇ ಅಮೋಘ ವಾರ

ಆರ್ಯಮಾಲ

ಪಿ. ಯು. ಚಿನ್ನಪ್ಪ ಪಂಕಾನಲಕ್ಷ್ಮಿ
ಶಕುಂತಲ ಕೃಷ್ಣ, ಮಧುರಾ
ಪಂಕಾದವರು ಪಾತ್ರವಹಿಸಿರುವರು

ಬ್ರಿಟಿಷರಿಗೆ ಗಾಂಧೀಜಿಯವರ ಹಿತೋಕ್ತಿ

ಕ್ಷಾಮ

ಸೀಪಡ್ ಡಿಸ್ಟ್ರಿಕ್ಟ್‌ಗಳಲ್ಲಿ ಕ್ಷಾಮ ಘೋರವಾಗಿದೆ.

ಒರಿಸ್ಸಾದಲ್ಲಿ ಕ್ಷಾಮವು ಅಧಿಕವಾಗಿದೆ. ಹುಲ್ಲು ಕುತ್ತಿ ಎಲೆಗಳನ್ನು ಕೂಡಾ ತಿಂದು ಜನರು ಜೀವಧಾರಣೆಯನ್ನು ಮಾಡಿಕೊಳ್ಳುತ್ತಿರುವರು ಅಲ್ಲಿಯ ಸರಕಾರವೂ ಜನರಿಗೆ ಹೆಚ್ಚು ಕಮ್ಮಕ್ಕು ಮಾಡುತ್ತಲಿರುವುದು.

ವೈದ್ಯರ ರಿಜಿಸ್ಟ್ರೇಷ್ಟ

ಸಿಂಧ್ ಸರಕಾರವು ಕೂಡ ಡಾಕ್ಟರರ ರಿಜಿಸ್ಟ್ರೇಷ್ಟ್ ಕಾನೂನನ್ನು, ಹಕೀಮ್ ಮತ್ತು ಆಯುರ್ವೇದ ವೈದ್ಯರ ಕಾನೂನನ್ನೂ ಜಾರಿಗೆ ತರಲಿದೆ.

ಚಂದ್ರಬೋಸರವರ ಮೇಲೆ ಆಪಾದನೆ

ಶ್ರೀ ಸುಭಾಷ್ ಚಂದ್ರ ಬೋಸರ ಮೇಲಿನ, ಫಾರ್ವರ್ಡ್ ಬ್ಲಾಕ್‌ನಲ್ಲಿ ಅವರು ಬರೆದಿದ್ದ 'ಡೇ ಆಫ್ ರೆಕನಿಂಗ್' ಎಂಬ ಲೇಖನದ ಸಂಬಂಧದಲ್ಲಿ ಆಗಿದ್ದ ಕೇಸು 1—5—43 ರಲ್ಲಿ ವಿಚಾರಣೆಗೆ ಬಂದು, 2—9—43 ಕ್ಕೆ ಮುಂದು ಹಾಕಲಾಗಿದೆ.

ಕುಡಿಯುವ ನೀರಿಗೆ ಬರವೇ?

ಚಿತ್ರೂರಿನಲ್ಲಿ ಎರಡು ತಿಂಗಳುಗಳಿಂದ ಆಹಾರ ಸಾಮಗ್ರಿಗಳ ದೊರೆಯುವಿಕೆಯು ಹಾಗಿರಲಿ, ನೀರಿನ ತೊಂದರೆ ಒಹಳ ಹೆಚ್ಚಾಗಿದೆ. ಅಲ್ಲಿಯ ಭಾವಿಗಳೆಲ್ಲಾ ಒಣಗಿ ಹೋಗುವೆ. ಜನರ ಹಾಹಾಕಾರವು ಹೆಚ್ಚಾಗಿದೆ.

Edited, Printed & published by M. S. Krishna Rao, at the Satyavadi Press. Chamaraja Agrahar, Mysore.

ಮಹಾತ್ಮಗಾಂಧಿಯವರು "ನಾನು ಪ್ರತಿಯೊಬ್ಬ ಬ್ರಿಟನ್ನಿನವನನ್ನು ಕ್ಷಮಿಸುತ್ತೇನೆ" ಎಂಬ 80 ಪುಟದ ಪುಸ್ತಕವನ್ನು ಲಂಡನ್ನಿನ ಒಂದು ಪುಸ್ತಕಾಲಯವು ಪ್ರಕಟಿಸಿರುವುದು. ಇದರಲ್ಲಿ ಗಾಂಧೀಜಿಯವರು 1942 ನೇ ಆಗಷ್ಟು ತಿಂಗಳ ಹಿಂದೆ ಬರೆದು, ಭಾಷಣಮಾಡಿದ ಹೇಳಿಕೆಗಳಲ್ಲಿ ಮುಖ್ಯವಾದುವನ್ನು ಆರಿಸಿ ಮುದ್ರಿಸಲಾಗಿದೆ ಈ ಪುಸ್ತಕದಲ್ಲಿ ಟಿಪ್ಪಣಿಯಾಗಲೀ ಮತ್ತಾವ ವಿಶೇಷ ಲೇಖನವಾಗಲೀ ಇಲ್ಲ. ಇದರ ಪ್ರಕಟಣಾಧ್ಯಕ್ಷತೆಯನ್ನು ಯಾರು ವಹಿಸಿಂದವರೋ ಅದು ಗೊತ್ತಾಗುವುದಿಲ್ಲ. ಇಂಡಿಯಾ—ಆಫೀಸ್—ಸೆಕ್ರಟರಿಯಾದ ಏ || ಪಿ. ಕೆ. ಕೃಷ್ಣಮೆನನ್ ಈ ಪುಸ್ತಕ ರಚನೆಯಲ್ಲಿ ಸಹಾಯ ಮಾಡಿದರೆಂದು ಊಹಿಸಲಾಗಿದೆ.

ವೈಸರಾಯ ಪದವಿ

ಲಂಡನ್ನಿನಲ್ಲಿನ ಹೊಸ ವರ್ತಮಾನದಂತೆ, ವೈಸರಾಯಿ ಪದವಿಯು ಸರ್ ಸ್ಯಾಮ್ಯುಲ್ ಹೋರ್, ಇಲ್ಲದಿದ್ದರೆ ಸರ್ ಆರ್ಚಿಬಲ್ಡ್ ಕ್ಲಾರ್ಕ್ ಕರವರಿಗೆ ಸಿಕ್ಕುವುದಾಗಿದೆ.

ಅಯ್ಯೋ ಪಾಪ

ನಾರ್ವೆಯಲ್ಲಿದ್ದ 4000 ಹೆಣ್ಣು ಮಕ್ಕಳನ್ನು ಕಲಸಕ್ಕೆ ಬಲಾತ್ಕಾರವಾಗಿ ಕರೆಮಕೊಂಡು ಹೋಗಿರುವರು.

ದ್ವಿತೀಯ ರಣರಂಗ

ಬ್ರಿಟಿಷ್ ಉತ್ಪತ್ತಿ ಮಂತ್ರಿ ಆಲಿವರ್ ಲಿಟಲ್‌ಟನ್ನರ್, ಬಹುಶಃ ಮೆಡಿಟರೇನಿಯನ್ನಿನಲ್ಲಿ ಎರಡನೇ ರಂಗವು ಆರಂಭವಾಗಬಹುದೆಂದು ಹೇಳಿರುವರು.

ಗೋಬೆಲ್ಸ್‌ರ ಮಾತು ಸುಳ್ಳಾಯಿತು

ಜರ್ಮನಿಯ ಮೇಲೆ ಈವರೆವಿಗೆ 100 ಟನ್ ಬಾಂಬನ್ನು ಬ್ರಿಟಿಷರು ಹಾಕಿ, ಧಾಳಿ ಮಾಡಿರುವರು. ಹಿಂದೆ ಡಾ || ಗೋಬೆಲ್ಸರವರು, ಬ್ರಿಟಿಷರ ಒಂದು ವಿಮಾನವೂ ಜರ್ಮನಿಯ ಮೇಲೆ ಬರಲಾರದೆಂದು ಹೇಳಿದ್ದರು!

ಉದಾರ ದಾನ

ನೈಜಾಂ ಹೈಲ್ಸ್ವಿಯವರು ವೈಸರಾಯರಿಗೆ ಯುದ್ಧ ನಿಧಿಗಾಗಿ 67 ಸಾವಿರ ರೂಪಾಯನ್ನು ಕಳುಹಿಸಿರುವರು. ಇವರು ಇಮನರೆಗೆ 177000 ರೂಪಾಯಿ ದಾನಾ ಮಾಡಿರುವರು

ಯೂರೋಪಿನ ದಂಡಯಾತ್ರೆ

ವಾಷಿಂಗ್‌ಟನ್ ಸಮ್ಮೇಳನದಲ್ಲಿ ಜನರಲ್ ಜೇಎಸ್‌ರವರು ಯೂರೋಪಿನ ದಂಡಯಾತ್ರೆಗೆ ಅಮೇರಿಕನ್ನರು ಸಿದ್ಧರಾಗಿರುತ್ತಾರೆಂದೂ ಅದರೆ ಯಾವಾಗ ಎನ್ನುವುದು ಮುಂದಾಲೋಚನೆಯನ್ನು ಇಟ್ಟುಕೊಂಡೇ ಮಾಡುತ್ತೇನೆಂದು ಹೇಳಿದರು.

ಕುಸ್ತಿ ಯುದ್ಧ

ರುಷ್ಯಾ ಮೇಲೆ ಜರ್ಮನಿಯವರು ಮುತ್ತಿಗೆ ಹಾಕಲು ಸಾಧ್ಯವಾದ 6½ ಮಾಸಗಳನ್ನು ಕಳೆದುಕೊಂಡರೂ, ರಷ್ಯನ್ನರಿಗೆ 10 ಮಾಸ ಮಾತ್ರ ನಷ್ಟವಾಗಿದೆ.

ಗುಪ್ತ ವರ್ತಮಾನಪತ್ರಿಕೆ

ಗುಪ್ತ ವರ್ತಮಾನಪತ್ರಿಕೆಗಳು ಜರ್ಮನಿಯವರು ಹಿಡಿದಿರುವ ದೇಶಗಳಲ್ಲಿ ಪ್ರಚುರವಾಗುತ್ತಿರುವುವು. ಇವೆಲ್ಲಾ ದೇಶದಲ್ಲಿ ಅಚ್ಚಾದಪಗಳಲ್ಲ. ಇಂಗ್ಲೆಂಡಿನಲ್ಲಿ ಒಂದು ಡಚ್ ಭಾಷೆಯಲ್ಲಿ ಭಾಗಿಯಂತಾಲಯದಲ್ಲಿ ಮುದ್ರಿಸಿ, ಬ್ರಿಟಿಷ್ ವಿಮಾನಗಳು ತಾವು ಧಾಳಿ ಮಾಡುವ ಕಾಲದಲ್ಲಿ ಅವುಗಳನ್ನು ಚೆಲ್ಲುತ್ತಿರುವುವು. ಒಂದೊಂದು ಕಟ್ಟಿನಲ್ಲಿ 500 ಪತ್ರಿಕೆಗಳಿರುವುವು. ಈ ಪತ್ರಿಕೆಗಳಲ್ಲಿ ಅನೇಕ ಚಿತ್ರಗಳಿರುವುವು. ನೋಡುವುದಕ್ಕೂ ಓದುವುದಕ್ಕೂ ಅಂದವಾಗಿರುವುದು. ಒಂದೊಂದು ಪತ್ರಿಕೆಯಲ್ಲಿ 10 ಸಾವಿರ ಮಾತುಗಳಿರುವುವು, 4 ಪುಟಗಳ ಆಕಾರವಿರುತ್ತೆ.

ಜರ್ಮನ್ ಲೆಕ್ಕ ....

ಸ್ವೀಡನ್ನಿನಲ್ಲಿ ಮೂಕುಳಿತ

ಅನೇಕ ಪ್ರಸಿದ್ಧ ವ್ಯಕ್ತಿಕಾರನು ಈಗ ಸ್ವೀಡನ್‌ನಿಂದ ಈ ಪ್ರಕಾರ ಬರೆದಿರುವಂತೆ ತೋರಿಕೆಗಳಿರುವನು —" ನಾನು ಒಂದು ಶ್ರೀಮಂತಿಕೆಯಲ್ಲಿ ಭಾಗಿಯಾಗಿದ್ದೆ. ಸ್ವೀಡನ್‌ನಲ್ಲಿ ಮೊಟರಿ ಉದ್ಯೋಗದಲ್ಲಿದ್ದ ಒಬ್ಬ ದೊಡ್ಡ ಅಧಿಕಾರಿಯೊಬ್ಬ ಇನ್ನೊಬ್ಬ ಬ್ಯಾಂಕಿನ ಅಧಿಕಾರಿಯೂ ಜರ್ಮನಿಯು ಇನ್ನೊಂದು ವರ್ಷಕ್ಕಿಂತ ಹೆಚ್ಚಾಗಿ ಯುದ್ಧಮಾಡಲಾರದೆಂದರು. ಇವರಲ್ಲದೆ ಇನ್ನೂ ಇತರ ದೊಡ್ಡವರನ್ನು ಸುಮಾರು 12 ಮಂದಿಯರ ಸಂಗಡ ಮಾತನಾಡಿದೆ ಎಲ್ಲರೂ ಒಂದು ವರ್ಷದಲ್ಲಿ ಜರ್ಮನಿ ಪೂರ್ತಿ ನೋಲಿನಿಂದ ಸ್ಮರಿಸುವುದು ಎಂದರು. ಒಬ್ಬ ಸ್ವೀಡ್ ಮುಖ್ಯಸ್ಥನು ಪದೇ ಪದೇ ಜರ್ಮನಿಗೆ ಹೋಗುತ್ತಿರುವನು. ಅವನಿಗೆ ಅಲ್ಲಿನ ಅನುಭವ ಹೆಚ್ಚು. ಅವನು ಹಿಟ್ಲರ್, ಹಿಮ್ಲರ್ ಮತ್ತು ಇನರಿಂಗಳ ಅನುಯಾಯಿಗಳಿಗೆ ನಂಬಿಕೆಯಿದ್ದರೂ, ಜರ್ಮನಿ ಪ್ರಜೆಗಳಿಗೆ ಯುದ್ಧಗೆಲ್ಲುವ ನಂಬಿಕೆಯಿಲ್ಲವೆಂದನು ಬ್ಬ ಜರ್ಮನ್ ಬಂಡವಾಳಗಾರನು ನಾಜಿಗಳು ಗೆಲ್ಲುವ ಸಂಭವವಿಲ್ಲವೆಂದು ಹೇಳಿದನು ".

ಡಾನೆಟ್ಸ್ ಯುದ್ಧ

ಲಿಪಿಟಾಕ್ಸ್‌ನಲ್ಲಿ ಡಾನೆಟ್ಸ್ ನದಿಯನ್ನು ರಷ್ಯನರು ದಾಟಿದರು. ಅಲ್ಲಿಂದ ಸೇತುವೆಯನ್ನು ಗೆದ್ದು ಇನ್ನೂ ಹೆಚ್ಚು ಪ್ರದೇಶವನ್ನು ವಶಪಡಿಸಿಕೊಂಡರು.

ವೋಪರನು ಜರ್ಮನಿಯನರ ಸ್ನೇಹ ತ್ಯಜಿಸಿವ್ವಾರೆ.

ಜಪಾನಿನ ಇಷ್ಟರಲ್ಲೇ ಬಲವಾದ ಸೇನೆಯನ್ನು ಚಕಿಂಗ್ ನಗರದ ಮೇಲೆ ನುಗ್ಗಿಸುವರೆಂದು ನಂಬಲಾಗಿದೆ.

ಹಿಂದೂಸ್ಥಾನದ ಸಂಪತ್ತು

(ನಿನ್ನೆಯ ಸಂಚಿಕೆಯಿಂದ ಮುಂದುವರಿದದ)

ಎಣ್ಣೆಬೀಜ—

ಹಿಂದೂಸ್ಥಾನದಲ್ಲಿ 23 ಮಿಲಿಯ್ಕ ಎಕರೆಗಳಲ್ಲಿ ಎಣ್ಣೆಯಾಗುವ ಬೀಜಗಳನ್ನು ಬೆಳೆಯುತ್ತಾರೆ. ಇವುಗಳಲ್ಲಿ ಕಳ್ಳೇಕಾಯಿ ಬೀಜ 3 ಮಿಲಿಯ್ಕ ಟ್ಕ ಬೆಳೆದು ಇದರಿಂದ 340000 ಟ್ಕ ಎಣ್ಣೆಯನ್ನು ತಯಾರು ಮಾಡುತ್ತಾರೆ ಇತರ ಬೀಜಗಳಿಂದ 1 ಮಿಲಿಯನ್ ಎಣ್ಣೆ ತಯಾರಾಗಿ ರಫ್ತಾಗುತ್ತಿದೆ ಹತ್ತಿ ಬೆಳೆಗೆ ಭಾರತವೇ ಪ್ರಪಂಚಕ್ಕೆ ತೌರುಮನೆಯು. ಇಲ್ಲಿ ಬೆಳೆಯುವ ಹತ್ತಿಯು ಪ್ರಪಂಚದ ಹತ್ತಿ ಬೆಳೆಯುವ ರಾಜ್ಯಗಳಲ್ಲಿ ಎಂಡನೇದು ಎನ್ನಬಹುದು. ವರ್ಷಕ್ಕೆ ನಾಲ್ಕು ಕಾಲು ಮಿಲಿಯ್ಕ ಬೇಲ್ ರಫ್ತಾಗುವುದು. ಸಣಬಿನ ಗೋಣಿಚೀಲ ಭಾರತಕ್ಕೆ ಮಾಸಲಾದದ್ದು ಎನ್ನಬಹುದು. ವರ್ಷಂಪ್ರತಿ 9 ಮಿಲಿಯ್ಕ ಬೇಲಿನ ಗೋಣಿಚೀಲವನ್ನು ಪಂದೇಶಕ್ಕೆ ರವಾನಿಸುವರು.

ಹೋಲಿಕೆ—

ನೆದರ್‌ಲ್ಯಾಂಡ್ಸ್ ಇಂಡೀಸ್, ಮಲಯ ಇವು ವ್ಯವಸಾಯದ ದೇಶಗಳು. ಯಾತಕ್ಕೆ ಭಾರತದಲ್ಲಿ ಇಷ್ಟು ವ್ಯವಸಾಯವಿದ್ದೂ, ಲೋಹಗಳೂ ಬಗೆಬಗೆಯಾದ ಖನಿಜ ವಸ್ತುಗಳಿದ್ದರೂ ತಲೆಯಾತಕ್ಕೆ ಎತ್ತದೇ ಇದೆ? ಕೂಲಿ ಹೆಚ್ಚಾಗಿ ಸಿಕ್ಕಿದರೂ ಕೆಲಸಗಾರರಿಲ್ಲ, ಭಂಡವಾಳವಿಲ್ಲ, ದೊಡ್ಡ ಕೈಗಾರಿಕೆಯನ್ನು ಏರ್ಪಡಿಸಲು ಅನುಮತಿ ಕೊಡುವುದಿಲ್ಲ. ಭಾರತದಲ್ಲಿ ಕೈಗಾರಿಕೆಗೆ ಬೇಕಾದ ಎಲ್ಲಾ ಸಾಧನಸಂಪತ್ತು ಇದ್ದರೂ ಏನೂ ಪ್ರಯೋಜನವಿಲ್ಲವಾಗಿದೆ.

ಖನಿಜಗಳು—

ಭಾರತದಲ್ಲಿ ಅತ್ಯುತ್ತಮವಾದ ಕಬ್ಬಿಣದ ಅದಿರು ಹೆಚ್ಚಾಗಿ ಸಿಗುವುದು. ಕಬ್ಬಿಣ ಕಾಯ್ಸಿಸಲು ಸೌದೆ, ಇಜ್ಜಲು ಸುಮಾರು 30 ರಿಂದ 60 ಜಲಿಯ್ಕ ಟ್ಕ ಉತ್ಪತ್ತಿಯಾಗಿ ಅದರಲ್ಲಿ 5 ಜಲಿಯ್ಕ ಒಳ್ಳೇ ಇಜ್ಜಲು ಸಿಗುವುದು ರಷ್ಯಾ ಬಿಟ್ಟರೆ ಭಾರತವೇ ಮಾಂಗನೀಸ್ ಸಿಗುವ ದೇಶ. ಇಲ್ಲಿ ವರ್ಷಕ್ಕೆ 1 ಮಿಲಿಯ್ಕ ಟ್ಕ ನಷ್ಟು ಭೂಮಿಯಿಂದ ತೆಗೆಯುವರು. ಇಲ್ಲಿ ಸಿಗುವ ಮಾಂಗನೀಸ್ ಲೋಕ ಪ್ರಸಿದ್ಧಿಯಾದದ್ದು. ಯು ನೈ ಟೆ ಡ್ ಸ್ಟೇಟ್ಸ್, ಕೆನಡದಲ್ಲಿ ಸಿಗುವುದಕ್ಕಿಂತ ಹೆಚ್ಚಾಗಿ ಈ ದೇಶದಲ್ಲಿ ಕಾಗೆಬಂಗಾರವು ಸಿಕ್ಕುತ್ತದೆ. ಒಳ್ಳೇ ಸ್ಟೀಲನ್ನು ತಯಾರು ಮಾಡುವುದಕ್ಕೂ, ಯುದ್ಧ ಹಡಗುಗಳಲ್ಲಿ ಹಾಕುವ ಸ್ಟೀಲ್ ಪ್ಲೇಟಿಗೆ ಬೇಕಾದ ಕ್ರೋಮೈಟ್ಸ್ ಭಾರತದಲ್ಲೆ ವಿಶೇಷವಾಗಿ ಸಿಗುವುದು. ಅಲುಮಿನಿಯಂ ತಯಾರು ಮಾಡುವ ಬಾಕ್ಸೈಟ್ ಸಹ ಹೇರಳವಾಗಿ ಸಿಗುವುದು.

ಭಾರತದಲ್ಲಿ ಖನಿಜಗಳನ್ನು ತೆಗೆಯಲು ಹೆಚ್ಚು ಉತ್ಸಾಹವಿಲ್ಲ. ತೆಗೆದದ್ದನ್ನು ಉಪಯೋಗಿಸುವ ತಿಳುವಳಿಕೆ ಇಲ್ಲ. ಹತ್ತಿಯಿಂದ ಬಟ್ಟೆ ಮಾಡುವುದನ್ನು ಬಿಟ್ಟರೆ ಇನ್ಯಾವುದು ಹರುಕಾಗಿ ನಡೆಯುತ್ತಿಲ್ಲ ಭಾರತದಲ್ಲಿ ಕಲ್ಲಿದ್ದಲು ವರ್ಷಕ್ಕೆ 24 ಮಿಲಿಯನ್ ಟ್ಕ ನಷ್ಟು ಉತ್ಪತ್ತಿ ಮಾಡುವರು. ಎರಡೂವರೆ ಮಿಲಿಯ್ಕ ಟನ್ ಕಬ್ಬಿಣ, 33,900 ಟನ್ ತಾಮ್ರ, 8000 ಟ್ಕ ಬಾಕ್ಸೈಟ್ ಇದನ್ನೆ 1934-38 ರಲ್ಲಿ ಉತ್ಪತ್ತಿ ಮಾಡಿದರು ಇದರ ಮೌಲ್ಯ 65 ಮಿಲಿಯ್ಕ ಡಾಲರುಗಳು. ಈಗ ಯುದ್ಧಕ್ಕೆ ಬೇಕಾದ ಸ್ಟೀಲು 12 ವರೆ ಲಕ್ಷ ಟ್ಕ ಮಾತ್ರ ಉತ್ಪತ್ತಿ 1941 ರಲ್ಲಿ ಆಯಿತೆಂದು ತಿಳಿಯಬರುತ್ತೆ. ಈಗಲಾದರೂ ಬ್ರಿಟಿಷರು ತಮ್ಮ ಮನಸ್ಸನ್ನು ಒದಲಾಯಿಸಿ ಯುದ್ಧಕ್ಕೆ ತತ್‌ಕ್ಷಣ ಬೇಕಾದ್ದನ್ನೆಲ್ಲಾ ಇಲ್ಲೆ ಮಾಡಿಸುವ ಮನಸ್ಸನ್ನು ಯಾಕೆ ಮಾಡಬಾರದು? ಈಗ ಅಮೇರಿಕಾದವರ ಸಹಾಯವು ನನಗೆ ಒರುತ್ತಾ ಇದೆ. ಇದನ್ನು ಉಪಯೋಗಿಸಿಕೊಳ್ಳಬಾರದೆ? ಭಾರತವು ವ್ಯವಸಾಯದಿಂದಲೇ ಜೀವಿಸಲಾದೀತೆ? ಕೈಗಾರಿಕೆ ಇರುವುದು ಅವಶ್ಯಕ.

ಶ್ರೀ ಟಾಗೂರರು

ಕೀ॥ ಶೇ॥ ರವೀಂದ್ರ ಟಾಗೂರ್ರವರ ಜನ್ಮದಿನೋತ್ಸವ ಸಂದರ್ಭದಲ್ಲಿ ಅಮೃತಬಜಾರು ಪತ್ರಿಕೆಯು ಹೀಗೆ ಬರೆದಿರುವುದು— ರವೀಂದ್ರ ಕವಿ ಅಸ್ತಮಿಸಿದನು, ಆದರೆ ಅತನ ಆತ್ಮವು ಸಜೀವನವಾಗಿಯೇ ಇದೆ. ಅತನನ್ನು ಸಂಸ್ಮರಿಸಿ ಭಾರತರಾಷ್ಟ್ರವು ಭಾರತೀಯ ವಿಮುಕ್ತತೆಯನ್ನು ಹೊಂದಬಲ್ಲದೆಂದು ನಂಬುವೆವು.

ಅಫ್ಘಾನ್

ಅಫ್ಘಾನ್ ಎಂಬ ಫಿಲ್ಮನ್ನು ಪ್ರದರ್ಶಿಸಕೂಡದೆಂದು ಅಫ್ಘಾನ್ ಸರಕಾರವು ಅನಜ್ಞೆ ನೂಡಿದೆ.

For good printing
Saraswati Printing Press
Lansdowne Buildings, Mysore
Lakshminarasimha Press
Srirampet, Mysore

ಸತ್ಯವಾದಿ ಪತ್ರಿಕೆಗೆ
ಚಂದಾದಾರರಾಗಿರಿ
ತಿಂಗಳಿಗೆ 0—6—0

ಅರ ಸಾಮಾಜಿಕ ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್ ಮೈಸೂರು

For All Kinds of
Printing & Binding
The Satyavadi Press
Chamarajapuram
Mysore

ಹೆಚ್. ಆರ್. ಜಿ. ಸಿ. ಯವರ
ಶ್ರೀ ಪಿಕ್ಚರ್ಸ್ ತಯಾರಿಕೆ
ವಾಣಿ ಎಂಬ ಕನ್ನಡ ಸಾಮಾಜಿಕ ಚಿತ್ರ
ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ

ಸಂಗೀತರತ್ನ ಟಿ. ಚೌಡಯ್ಯ, ಕಲ್ಚರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯ, ಗಾಯನಗಾಂಧರ್ವ ಚಂಪೆ ವೈದ್ಯನಾಥ ಭಾಗವತರ್ ವೃದಂಗವಿದ್ವಾನ್ ಮಣಿ ಕೋಕಿಲಕಂಠ ಬಳ್ಳಾರಿ ಲಲಿತ, ಚಾಂದ್ರಮ್ಮ, ರತ್ನ, ಪಂಡರೀಬಾಯಿ, ಧನಭಾಗ್ಯಂ ಎ. ನಾರಾಯಣರಾವ್, ಕೆ. ಎಂ. ಮಹದೇವ್, ಮಾಸ್ಟರ್ ಬಿ. ವಿ. ಕೆ. ಮೂರ್ತಿ ಮುಂತಾದವರು ತಾರಾಗಣದಲ್ಲಿದ್ದಾರೆ.
ನಿರ್ದೇಶಕರು— ಜಿ. ಆರ್. ರಾಮಯ್ಯನವರು
ಸಂಗೀತ ನಿರ್ದೇಶಕರು— ಸಂಗೀತರತ್ನ ಟಿ. ಚೌಡಯ್ಯನವರು
ತಯಾರಿಕೆ— ಸಾಹುಕಾರ್ ಟಿ. ಎಸ್. ಶಿವಬಸವಸ್ವಾಮಿ
ಕಥಾ ಮತ್ತು ದಿಗ್ದರ್ಶಕರು— ಕೆ. ಹಿರಣ್ಣಯ್ಯ ಮತ್ತು ಎಂ. ಎಸ್. ಗೋಪಾಲ
ಸ್ಟೂಡಿಯೊ—ಸೆಂಟ್ರಲ್ ಸ್ಟೂಡಿಯೋಸ್ ಲಿಮಿಟೆಡ್, ಕೊಯಮತ್ತೂರು

ರಣಜಿತ್ ಟಾಕೀಸ್ RANJIT — UJALA
ಪ್ರತಿದಿನ 3 ಆಟಗಳು ಹಿಂದೀ ಭಾಷೆ

ಸೌಂದರ್ಯ ಸೊಬಗಿನ ತಾರೆ **ನಾಸೀಮ್**
ಮತ್ತು ನಟಶ್ರೇಷ್ಠ ಪೃಥ್ವೀರಾಜ್
ಪಾತ್ರವಹಿಸಿರುವ

ಉಜಾಲ

ಸಹಾಯಕನಟರು— { ರತ್ನಬಾಯಿ, ಮಿತ್ಟಾ ಮುಸ್ತಾಫ್ ಮುಬಾರಕ್ ಮುಂತಾದವರು

ಶಕ್ತಿ ಸಾಧನೆಗೆ ಸುಲಭೋಪಾಯವು
ಸೇವನೆ ಎಂಬುವುದು ನಿಮ್ಮ ಜ್ಞಾಪಕದಲ್ಲಿರಲಿ
ಅನೇಕರಿಂದ ಪ್ರಶಂಸಿಸಲ್ಪಟ್ಟಿದೆ. ವಸ್ತುಪ್ರದರ್ಶನಗಳಲ್ಲಿ ಪ್ರಾಶಸ್ತ್ಯವನ್ನು ಪಡೆದಿವೆ
.... ಬೆಲೆ 1 ರೂಪಾಯಿ

ವಾರ್ತಾತರಂಗ

ಕಲಕತ್ತಾ ಹೈಕೋರ್ಟಿನಲ್ಲಿ ಡಿಫೆನ್ಸ್ ಆಕ್ಟ್ 26 ರ ಮೇಲೆ ನಿಬಂಧ್ದದಲ್ಲಿದ್ದವರು ತಮ್ಮನ್ನು ಬಿಡುಗಡೆ ಮಾಡಬೇಕೆಂದು ಮನವಿಮಾಡಿ ಕೊಂಡಿದ್ದರು. ಇವರನ್ನೆಲ್ಲಾ ಇಬ್ಬರು ಜಡ್ಜಿಗಳು ಖುಲಾಸೆಮಾಡಿ ಸೆಂಟ್ರಲ್ ಲೆಜಿಸಲೇಚರ್‌ರವರು ಮಾಡಿದ ಖಾನೂನನ್ನು ತಿದ್ದಲು ಗವರ್ನಲ್ ಜನರಲ್‌ರವರಿಗೆ ಅಧಿಕಾರವನ್ನು ಪಾರ್ಲಿಮೆಂಟ್ ಕೊಟ್ಟಿಲ್ಲವೆಂದು ಹೇಳಿ ಬಿಟ್ಟರು. 3 ನೇ ಜಡ್ಜಿಗಳು ಈ ಇಬ್ಬರ ನ್ಯಾಯವನ್ನು ಒಪ್ಪಲಿಲ್ಲ. ಇವರನ್ನೆಲ್ಲಾ ಕೋರ್ಟಿನಿಂದ ಬಿಡುಗಡೆಯಾದ ಮೇಲೆ 1818 ನೇ ರೆಗ್ಯುಲೇಷ್ನ್ 3 ನೇ ಪ್ರಕಾರ ಎಲ್ಲರೂ ದಸ್ತಗಿರಿಯಾದರು.

ಂ ಂ

ಓರಿಸ್ಸಾದೇಶಿಯ ಸಂಸ್ಥಾನಗಳಲ್ಲಿ ಅಕ್ಕಿ ನಿರ್ಬಂಧನವನ್ನು ತೆಗೆದುಹಾಕಿದ್ದರಿಂದ ಅಕ್ಕಿಯನ್ನು ಬ್ರಿಟಿಷ್ ಗಡಿ ರೈಲ್ವೆಸ್ಟೇಷನ್‌ನಲ್ಲಿ ಒಂದು ಚೀಲ ಅಕ್ಕಿಗೆ 35 ರೂ. ಆಗುವುದು. ಬಂಗಾಳಾದ ಮಿಡ್ನಾಪುರದಿಂದ ಜನರು ಬಾಲಸೂರಿಗೆ ರೈಲಿನಲ್ಲಿ ಟಿಕೇಟ್ ತೆಗೆದುಕೊಳ್ಳದೆ ಪ್ರಯಾಣ ಮಾಡಿ ಅಕ್ಕಿಯನ್ನು ಕೊಳ್ಳಲು ತಂಡ ತಂಡವಾಗಿ ಬರುತ್ತಿರುವರು. ಬಂಗಾಳದಿಂದ ವರ್ತಕರೂ ಅಕ್ಕಿಯನ್ನು ಕೊಳ್ಳಲು ಒರುತ್ತಿರುವರಂತೆ

ಂ ಂ

ಲಿಬರ್ಟಿ ಪತ್ರಿಕೆಯ ಬಾತ್ಮಿದಾರರಾದ ಮಿಸೆಸ್ ಎರಿಕಮ್ಯಾಕ್ ಈಗ ಲಂಡನ್ನಿಗೆ ಬಂದಿರುತ್ತಾಳೆ. ಈಕೆಯು ಯುದ್ಧಕಾಲದಲ್ಲಿ ಅಮೇರಿಕಾವು ಭಾರತ ವಿಷಯದಲ್ಲಿ ಏನು ಮಾಡಲು ಆಗುವುದಿಲ್ಲ, ಯುದ್ಧ ಪೂರ್ವ ಏನು ಬೇಕಾದರೂ ಮಾಡಬಹುದಾಗಿತ್ತು: ವಂದಿನ ವರ್ಷದ ಚುನಾವಣೆಯಲ್ಲಿ ಮಿ || ವೆಂಡಲ್ ವಿಲ್ಕಿಯವರು ಪ್ರೆಸಿಡೆಂಟು ಸ್ಥಾನಕ್ಕೆ ಬಂದರೂ ಅವರೂ ಸಹಾ ಯುದ್ಧಕಾಲದಲ್ಲಿ ಕೈ ಹಾಕಲು ಆಗುವುದೇ ಇಲ್ಲ, ಎಂದು ಹೇಳಿದರು.

ಂ

ಅಮೇರಿಕಾ ಲೇಖಕರಾದ ಲೂಯಿ ಫಿಸರ್‌ರವರು ಭಾಷಣ ಇಲ್ಲವೇ ಲೇಖನವನ್ನು ಪ್ರಕಟಿಸುವುದಕ್ಕೆ ಪೂರ್ವ ಸರ್ಕಾರಿ ಆಡ್ವೈಸರ ವಿಮರ್ಶೆಮಾಡಿ ನಂತರ ಪ್ರಕಟಿಸಬೇಕೆಂದು ಆಜ್ಞೆಯಾಗಿದೆ.

ಂ ಂ

ಗ್ರೀಸ್ ರಾಜಧಾನಿಯಾದ ಅಥೆನ್ಸ್‌ನಲ್ಲಿ ಹೊಟ್ಟೆಗಿಲ್ಲದೆ ಒಂದು ಲಕ್ಷಕ್ಕಿಂತ ಹೆಚ್ಚು ಜನರು ಸತ್ತಿರುವರೆಂದು ತಿಳಿಯಬಂದಿದೆ.

ಮಿ|| ಚರ್ಚಿಲರು ಅಮೇರಿಕಾ ಪ್ರವಾಸ ಮುಗಿಸಿ, ಆಲ್ಜೀರಿಸ್‌ಗೆ ಬಂದು, ಅಲ್ಲಿಗೆ ಬಂದಿದ್ದ ಮಿ|| ಈಡನ್ನು ನೋಡಿ ಜನರಲ್ ವೆಸ್ಟ್‌ಪೋವರನ್ನು ಭೇಟಿಮಾಡಿ ಟ್ಯೂನಿಸಿಸ್ ರಣರಂಗವನ್ನು ನೋಡಿ. ಜಿರೋ ಡಿಗಾಲ್ ಸತ್ಕಾರ ಕೂಟದಲ್ಲಿ ತಾವೂ ಭಾಗಿಯಾಗಿದ್ದು ಶುಕ್ರವಾರ ಲಂಡನ್‌ಗೆ ಸುರಕ್ಷಿತವಾಗಿ ತಲಪಿದರು.

ಂ ಂ

ಈಜಿಪ್ಟಿನಲ್ಲಿ ಧಾನ್ಯ ಶೇಖರಣೆ, ಅಧಿಕ ಲಾಭಸಂಪಾದನೆಗೆ ನಿಷೇಧಮಾಡಿರುವರ. ಕೆಲವ್ಯಕಡೆ ಶೋಧನೆ ನಡಿಸಿ 2 ಲಕ್ಷ ಪೌಂಡುಗಳನ್ನು ಬಚ್ಚಿಟ್ಟಿದ್ದ ಪದಾರ್ಥಗಳನ್ನು ಸರ್ಕಾರದವರು ತಮ್ಮ ವಶಮಾಡಿಕೊಂಡರು.

ಂ ಂ

ಮದರಾಸಿನಲ್ಲಿ ಕಾಗದದ ಅಭಾವದಿಂದ ಎಸ್. ಎಸ್. ಎಲ್. ಸಿ. ಯ 1943 ನೇ ಇಸವಿಯ ಪುಸ್ತಕಗಳೇ 1944 ಕ್ಕೂ ಇರತಕ್ಕದ್ದೆಂದು ಆಜ್ಞೆಯಾಗಿದೆ.

ಂ ಂ

ಸುಮಾರು 70 ಬ್ರಿಟಿಷ್ ಮಹಿಳೆಯವರು ಭಾರತದ ಸ್ಟೇಟ್ ಸೆಕ್ರಟರಿಯವರಿಗೆ ಒಂದು ಪತ್ರ ಬರೆದು ಕಾಂಗ್ರೆಸ್ ನಾಯಕರೊಂದಿಗೆ ಸಂಬಂಧ ಬೆಳಿಸಿ, ಅವರೆಸ್ಟು ಬಿಡುಗಡೆಮಾಡಿ ಇದರಿಂದ ಸರ್ವರಿಗೂ ಕ್ಷೇಮವೆಂದು ಬರೆದಿರುತ್ತಾರೆ. 100 ಶತೃಗಳನ್ನ ಕೊಲೆಮಾಡಿದರು.

ಂ ಂ

ಈಗ ಅಮೇರಿಕ ವಿಮಾನಗಳು ಚೀನಾಕ್ಕೆ ಒಂದಿದ್ದರಿಂದ ಚೀನಾಕ್ಕೆ ರಕ್ಷಣೆ ದೊರತಂತೆಂದೂ, ಚುಂಕಿಂಗ್ ಮುತ್ತಿಗೆ ತಪ್ಪಿತೆಂದೂ ಚೀನಾ ವಿದೇಶಾಂಗ ಮಂತ್ರಿ ಡಾ|| ಟಿ ವಿ. ಸೂಂಗ್‌ರವರು ಮಿ|| ರೂಸೆಲ್ಟರಿಗೆ ಒಂದು ವರದಿ ಕಳಿಸಿರುತ್ತಾರೆ.

ಂ ಂ

ಫ್ರೆಂಚ್ ಇತಿಹಾಸದಲ್ಲಿ ಜೂನ್ 3 ಪ್ರಸಿದ್ಧಿಯಾದ ದಿವಸ ಈದಿವಸ ಜನರಲ್ ಡಿಗಾಲ್, ಜನರಲ್ ಜಿರೋ ಇವರಿಬ್ಬರು ಒಂದು ಒಪ್ಪಂದಕ್ಕೆ ಬಂದರು. ಇದನ್ನು ನೋಡಿ ಮಾರ್ಷಲ್ ಪಿಟೇನ್ ಲವಾಲ್ ಇವರಿಗೆ ಭೀತಿಯಾಗಿದೆ.

ಂ ಂ

ಕಮ್ಮಿ ಬೆಲೆಯ ಬಟ್ಟೆಯ ತಯಾರಿಕೆ ವಿಷಯದಲ್ಲಿ ಸರ್ಕಾರಕ್ಕೂ ಮಿಲ್‌ಯಜಮಾನರಿಗೂ ಒಪ್ಪಂಡವಾಗಿ ಇನ್ನು 6 ತಿಂಗಳಲ್ಲಿ 1 ಸಾವಿರ ಮಿಲಿಯಿ ಗಜ ಬಟ್ಟೆಯನ್ನು ತಯಾರುಮಾಡಿ ಪೂರುರಮ.

ಂ ಂ

ಬೀಗಾದಲ್ಲಿದ್ದ 1000 ಜನರನ್ನು ಜರ್ಮನಿಯವರು ಗಲ್ಲಿಗೇರಿಸಿದರೆಂದು ತಿಳಿಯಬಂದಿದೆ.

ನೀಗ್ರೋ ವಿಮಾನಕಾರರು ಇಷ್ಟರಲ್ಲೆ ಆಕ್ಸಿಸ್ಸರ ಮೇಲೆ ಧಾಳಿ ನಡೆಸುವರಂತೆ. ಈಗಲಾದರೂ ನೀಗ್ರೋ ಜನರು ಕಣ್ಣಿಗೆ ಬಿದ್ದರಲ್ಲಾ !

ಂ ಂ

ಮೇ ತಿಂಗಳಲ್ಲಿ ಬ್ರಿಟಿಷ್ ವಿಮಾನಗಳು ಜರ್ಮನಿಯಮೇಲೆ 12,500 ಟ್ಟ ಸಿಡಿಮದ್ದನ್ನು ಹಾಕಿ ಧಾಳಿ ಮಾಡಿದವು.

ಂ ಂ

ನೀಲಗಿರಿ ಮತ್ತು ಅದರ ಸುತ್ತಮುತ್ತ ಇರತಕ್ಕವರಿಗೆ ಅನುಕೂಲವಾಗುವಂತೆ ಕರಾಚಿಯಿಂದ ಗೋಧಿ ಮತ್ತು ಗೋಧಿ ಹಿಟ್ಟು ರವಾನೆಯಾಗಿದೆ.

ಂ ಂ

ರಷ್ಯಾದಲ್ಲಿ ಯಾರ ಶಕ್ತಿ ಅಂತರಕ್ಷದಲ್ಲಿ ಹೆಚ್ಚೆಂದು ತಿಳಿಯಲು ರಷ್ಯನರೂ ಜರ್ಮನರೂ ಅಗಾಧ ವಿಮಾನಗಳನ್ನು ಜಮಾಯಿಸುತ್ತಿರುವರು.

ಂ ಂ

ಕೊಚ್ಚಿನ್ ಸರಕಾರದವರು ಇನ್ನು ಮುಂದೆ ಸ್ಕಿಂಟು ಮಾಡುವ ಪಾಠಶಾಲೆಯ ಪುಸ್ತಕದ ಬೆಲೆಯನ್ನು ಶೇಕಡ 30 ರಂತೆ ಹೆಚ್ಚಿಸಲು ಅನುಮತಿ ಕೊಟ್ಟಿದಾರೆ

ಂ ಂ

ಮಿ|| ರೂಸ್ವೆಲ್ಟರೂ ಮಿ | ಚರ್ಚಿಲರೂ ಮಾತುಕತೆ ನಡೆಸಿದ ಫಲವಾಗಿ ಇನ್ನು ಮುಂದೆ ಜಪಾನಿನ ಮೇಲೆ ಹೂಡುವ ಯುದ್ಧದಲ್ಲಿ ಭಾರತವು ಪ್ರಮುಖ ಪಾತ್ರ ವಹಿಸುವುದೆಂದು ಅಮೇರಿಕನ್ನರು ಅಭಿಪ್ರಾಯ ಪಡುತ್ತಾರೆ.

ಂ ಂ

ಈಜೆಗೆ ಜರ್ಮನ್ ಸಬ್ ಮೆರೀನಿನ ಹಾವಳಿ ಕಮ್ಮಿಯಾಗಿ, ಹಡಗುಗಳು ಮುಳುಗುವುದು ಕಮ್ಮಿಯಾಗಿದೆಯಷ್ಟೆ. ಹೀಗೆ ಸುಮ್ಮನಿರುವುದನ್ನು ನೋಡಿದರೆ ಜೂನ್‌ನಲ್ಲಿ ಯಾವಾಗಲೋ ಒಂದು ದೊಡ್ಡ ಪ್ರಳಯವಾಗುವಹಾಗಿದೆ ಎಂದು ಅಮೆರಿಕನ್ ನೌಕೆಯ ಸೆಕ್ರೆಟರಿ ಕರ್ನಲ್ ನಾಕ್ಸ್‌ರವರು ಹೇಳುತ್ತಾರೆ.

ಂ ಂ

ಭಾರತದಿಂದ 25 ಮಂದಿ ವೈಮಾನಿಮಾನಿಕರು ಫ್ಲೈಟರ್ ವಿಮಾನ ಶಿಕ್ಷಣ ಪಡೆಯಲು ಇಂಗ್ಲೆಂಡಿಗೆ ಹೊರಟಿರುವರು ಅಲ್ಲದೆ 25 ಮಂದಿ ಕೆನಡಾಕ್ಕೆ ಹೋಗಿ ಅಲ್ಲಿ ವಿಮಾನ ಶಿಕ್ಷಣ ಪಡೆದು, ಅಲ್ಲಿಂದ ಫ್ಲೈಟರ್ ವಿಮಾನ ಶಿಕ್ಷಣವನ್ನು ಪಡೆಯಲು ಇಂಗ್ಲೆಂಡಿಗೆ ಬರುವರು

ಂ ಂ

ಆರ್ಜೆಂಟೈನಾದ ಮಂತ್ರಿಮಂಡಲವು ರಾಜೀನಾಮೆ ಕೊಟ್ಟು ಲಾಪ್ಲಾಟಾಕ್ಕೆ ಹೋದರು. ಗಲಭೆಗೆ ಕಾರಣವಿಲ್ಲ. ಎಲ್ಲಾ ಶಾಂತ ಸ್ಥಿತಿಯಲ್ಲಿದೆ. ಹೊಸ ರಾಜ್ಯಾಂಗದಿಂದ ಸ್ಪೇನಿನ ಸ್ನೇಹಭಾವಕ್ಕೆ ಕುಂದಕ್ಕಬರಬಹುದು, ವಿತ್ತ ಆಕ್ಸಿಸ್ಸರೊಡನೆ ಸ್ನೇಹಭಾವ ತ್ಯಜಿಸಬಹುದು

ಆಫ್ರಿಕಾ ಯುದ್ಧಕ್ಕೆ ಭಾರತದ ಸಹಾಯ

ಉತ್ತರ ಆಫ್ರಿಕಾ ಯುದ್ಧದ ಮೊದಲು ಎರಡೂವರೆ ವರ್ಷದಲ್ಲಿ ಭರತದಿಂದ ಆಹಾರ ಸಾಮಗ್ರಿಗಳೆಲ್ಲವೂ ಬಂದವು ಅಲ್ಲದೆ ಮುಸೋಲಿನಿಯ ಆಫ್ರಿಕಾ ಸಾಂಬ್ರಾಜ್ಯವು ನಾಶವಾಗುವುದಕ್ಕೂ ಭಾರತದ ಸೇನೆಯು ಕಾರಣವು. ಭಾರತದ ಕಾನ್ವಾಯಿ ಹಡಗುಗಳಲ್ಲೇ ಒಂದೂವರೆ ಮಿಲಿಯ್ ಟ್ಟ ಆಹಾರ ಪದಾರ್ಥಗಳು ಸಾಗಿವೆ. ಅಮೇರಿಕಾ ಸಹಾಯ ಒದಗುವುದಕ್ಕಿಂತ ಮುಂಚೆ, ಮಿತ್ರಸೇನೆಗಳಿಗೆ ಬೇಕಾದ ಎಲ್ಲಾ ಸಾಮಗ್ರಿಗಳೂ ಭಾರತದಿಂದಲೇ ಬರಬೇಕಾಗಿತ್ತು. ಭಾರತವು ಉತ್ತರ ಆಫ್ರಿಕಾ ರಣರಂಗಕ್ಕೆ ಕಳುಹಿಸದಿದ್ದರೆ, ರಷ್ಯಾಕ್ಕೆ ಮಿತ್ರರು ಸರಬರಾಜು ಮಾಡಲು ಬಹಳ ತೊಂದರೆಯಾಗುತ್ತಿತ್ತು. ಈ ವಿಷಯದಲ್ಲಿ ಭಾರತವು ಬಹಳ ಸಹಾಯನೂಡಿದೆ.

ಭಾರತದ ಉಕ್ಕಿನಿಂದ, ಉಕ್ಕಿನ ಗುಡಿಸಲು ಮನೆ ಗ್ಯಾರೇಜ್ ಆಸ್ಪತ್ರೆ ಏರಪ್ಲೇನು ನಿರ್ಮಾಣ ಇವೆಲ್ಲಾ ಕಟ್ಟಲ್ಪಟ್ಟವು. ಒಂದು ಸಾವಿರ ಎಕರೆಗೆ ಬೇಕಾಪಷ್ಟು ಉಕ್ಕು ಬಂದಿತು ; ಸಾವಿರಾರು ಮೈಲಿ ಕುಡಿಯುವ ನೀರನ್ನು ಒದಗಿಸಲು ಭಾರತದ ಉಕ್ಕಿನ ನಲ್ಲಿಗಳನ್ನು ಭಾರತದ ಇಂಜಿನಿಯರುಗಳು ಸೇನೆ ಹೋದಂತೆ ರೈಲ್ವೇ ಲೈನುಗಳನ್ನು ಜೋಡಿಸಿದರು.

ಮೆಡಿಟರೇನಿಯನ್ನಿಂದ ಟುಬ್ರೂಕಿಗೆ ರೈಲ್ವೆಯನ್ನು ನಿರ್ಮಾಣ ಮಾಡಿದವರು ಭಾರತೀಯರು. ಭಾರತೀಯರು ತಯಾರಿಸಿದ ವಿದ್ಯುತ್ಶಂತಿ, ವಿದ್ಯುತ್ ಬೀಸಣಿಗೆ, ನೀರಿನ ಪಂಪು, ಬ್ಯಾಟರಿ ಇತ್ಯಾದಿಕಳುಹಿಸಲಾಯಿತು. ಬ್ರಿಟನ್ನಿನಿಂದ ಇವನ್ನು ತರಿಸಲು ಸುತ್ತಿ ಬರಲು ಸಾವಕಾಶವಾಗುತ್ತಿತ್ತು. ಭಾರತದಿಂದ ಆರ್. ಎ. ಎಫ್. ವಿಮಾನಗಳಿಗೆ 5 ಮಿಲಿಯ ಸೆಲ್‌ಗಳು ಕಳುಹಿಸಲಾಗಿದೆ ಬ್ಯಾಟರಿ ಲಿಬ್ಬು ಹೇಳುವುದು ಬಹಳ ಕಷ್ಟವಾಗುವುದು. ಯುಪಟ್ರೇಯ್ ರಣರಂಗದಲ್ಲಿ ಉಪಯೋಗಿಸಿದ ಬಂದೂಕುಗಳೂ ಭಾರತದಲ್ಲಿ ತಯಾರಾದ್ದುವು — ಹೀಗೆಂದು ಅಮೇರಿಕಾ ಯುದ್ಧ ಕಛೇರಿಯವರು ಪ್ರಕಟಿಸಿರುತ್ತಾರೆ.

—ಂ—

ದೇಶಾಭಿಮಾನ ಸ್ವಾಭಿಮಾನ

ಇವ್ರಗಳೆಂಡರ ದೃಷ್ಟಿಯಿಂದಲೂ ಮೈಸೂರಿನವರಿಗೆ ಜೀವವಿಮೆ ಮಾಡಲು

ಮೈಸೂರು ಸರ್ಕಾರದ ಜೀವವಿಮೆ ಇಲಾಖೆಯು!

ಪ್ರಜೆಗಳ ಶಾಖೆಯೇ ಅತ್ಯುತ್ತಮ ಸಂಸ್ಥೆ!

ವಿಮೆಯ ಮೊಬಲಗಿಗೆ ಸರ್ಕಾರದ ಹುಟ್ಟುವಳಿಯೇ ಆಧಾರ

ವಿಮೇಯಹಣವನ್ನು ಸ್ವಲ್ಪವೂ ಸಾವಕಾಶವಿಲ್ಲದೆ ಪಾವತಿಮಾಡಲಾಗುವದು.

ವಿಮೆದಾರರಿಗೆ ಆಡಳಿತ ಸಮಯದಲ್ಲಿ ಪ್ರಾತಿನಿಧ್ಯವುಂಟು

ಪಾವಿರಕ್ಕೆ ಪಾಲಿಯಾನಾ ಇಪ್ಪತ್ತು ರೂ. ಗಳಂತೆ ಬೋನಸ್ ಹಂಚಿದೆ

ಹೆಚ್ಚು ವಿವರಗಳಿಗೆ ದಯವಿಟ್ಟು ಬರೆಯಿರಿ—

ಸೆಕ್ರೆಟರಿ,

ಮೈಸೂರು ಸರ್ಕಾರದ ಜೀವವಿಮೆ ಇಲಾಖೆ

ಬೆಂಗಳೂರು.

ಉತ್ಕೃಷ್ಟವಾದ ಹಿಂಗು



ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

ಊಟವು ರುಚಿಕರವಾಗಿದ್ದು, ಸಂಪೂರ್ಣ ಆರೋಗ್ಯವೂ, ಸೌಖ್ಯವೂ ದೊರೆಯಲು.

T.G. ಮಾರ್ಕಿನ ಹಿಂಗನ್ನು

ಉಪಯೋಗಿಸಿ.

ಇದನ್ನು ನೀವು ಒಂದು ಸಾರಿ ಉಪಯೋಗಿಸಿದರೆ, ನಂತರ ಬೇರೆ ಯಾವುದನ್ನೂ ಉಪಯೋಗಿಸುವುದಿಲ್ಲ.

ಒಂದು, ಅರ್ಧ, ಕಾಲು ಪೌಂಡಿನ, ಹಿಂದು ಸೇರು, ಒಂದು ಪಲಪ್ಪ್ ಪ್ಯಾಕಿನಲ್ಲಿ ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲೂ ದೊರೆಯುತ್ತದೆ.

ನಮ್ಮ ಪರಿಮಳ ಅಡಿಕೆಪುಡಿಯು ಸುಪ್ರಸಿದ್ಧವಾದುದು.

ವಲ್ಲಭದಾಸ್ ತೇಜ್‌ಪಾಲ್

೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಮದರಾಸು.

New Opera Talkies — Aryamala

ಪಿ. ಯು. ಚಿನ್ನಪ್ಪ, ಸರೋಜಿನಿ, ಸಂತಾನಲಕ್ಷ್ಮಿ & ಶಕುಂತಲ ಕೃಷ್ಣಕ್, ಮಧುರಂ ಮುಂತಾದವರು ಪಾತ್ರವಹಿಸಿರುವರು

ಆರ್ಯಮಾಲಾ

ತಮಿಳು ಚಿತ್ರ

5th Week ನೇ ವಾರ

Ranjit — — Satyabhama

ರಣಜಿತ್ ಟಾಕೀಸ್

2nd Week ವೈ ವಿ ರಾವ್, ಪುಷ್ಪವಲ್ಲಿ ಪಾತ್ರವಹಿಸಿರುವ **ಸತ್ಯಭಾಮಾ** [ತೆಲಗು]

— ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್ ತಯಾರಿಕೆ

ವಾಣಿ OR **[Violinist]**

ಎಂಬ ಕನ್ನಡ ಸಾಮಾಜಿಕ ಚಿತ್ರ

ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ

ಮೈಸೂರು ವೈಶ್ಯ ಪತ್ರಿಕೆ

ಉತ್ತಮ ಸಚಿತ್ರ ಕನ್ನಡ ತೆಲಗು

ಮಾಸಪತ್ರಿಕೆಗೆ

ಚಂದಾದಾರರಾಗಿರಿ

ಈಗಿಗ ವಾರ್ಷಿಕ ಚಂದಾ ರೂ. ೩–೦–೦

ಬಿಡಿ ಪ್ರತಿ 4 ಆಣೆ.

ಹಿಂದಾಬಾಥಮ್ಸ್ ರೈಲ್ವೆ ಬುಕ್‌ಸ್ಟಾಲ್ ನಲ್ಲಿಯೂ ಪತ್ರಿಕೆಯು ತೊರೆಯುತ್ತೆ.

ಕಾರ್ಯಾಲಯ;

ಶ್ರೀ ವಾಸವಾಂಬ ಭವನ

ಅಶೋಕ ರಸ್ತೆ — ಮೈಸೂರು

For good printing

Saraswati PrintingPress

Lansdowne Buildings, Mysore

Lakshminarasimha Press

Srirampet, Mysore

Edited, Printed & published by M. S. Krishna Rao, at the Satyavadi Press. Chamaraja Agrahar, Mysore.

ತ್ರಿಫಲಾ

ಸೇವನೆಯಿಂದ ರಕ್ತಕೊರತೆ, ಮಲಬಂಧ, ನಂಗಳ ಅಶಕ್ತತೆ, ದೌರ್ಬಲ್ಯ, ನಿದ್ರಾಭಂಗ ನಿವಾರಣೆಯಾಗಿ, ಸಂಸಾರಸುಖಕ್ಕೆ ಅಪರಿಮಿತ ಶಕ್ತಿ ಲಭಿಸುವದು

ಅನೇಕರಿಂದ ಪ್ರಶಂಸಿಸಲ್ಪಟ್ಟಿದೆ. ವಸ್ತುಪ್ರದರ್ಶನಗಳಲ್ಲಿ ಪ್ರಾಶಸ್ತ್ಯವನ್ನು ಪಡೆದಿದೆ. ಬೆಲೆ 1 ರೂಪಾಯಿ